


# ಚಿನ್ನ ಗೆಲ್ಲಬಹುದೆ?

ಸೆ.19ರಿಂದ ಅ.4ರವರೆಗೆ ದಕ್ಷಿಣ ಕೊರಿಯಾದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ ಬಾಕ್ಸಿಂಗ್‌ನಲ್ಲಿ ಮೇರಿ ಕೋಮ್ ಚಿನ್ನ ಗೆಲ್ಲಬಹುದೆ? 'ಏಷ್ಯನ್ ಗೇಮ್ಸ್ ಬಿಡಿ, 2016ರಲ್ಲಿ ರಿಯೋದಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲೂ ಚಿನ್ನ ಗೆಲ್ಲುತ್ತೇನೆ' ಎನ್ನುತ್ತಿದ್ದಾರೆ ಮೇರಿ ಕೋಮ್. ಕ್ರೀಡಾಪಟುವೊಬ್ಬನ ಆತ್ಮವಿಶ್ವಾಸಕ್ಕೆ ಮಿತಿಯೇ ಇರುವುದಿಲ್ಲ. ಈ ಆತ್ಮವಿಶ್ವಾಸ ಸುಖಾಸುಮ್ಮನೆ ಬರುವುದೂ ಇಲ್ಲ. ಐದು ಸಲ ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್ ಆಗಿರುವ ಮೇರಿ ಕೋಮ್‌ಗೆ ಆ ಆತ್ಮವಿಶ್ವಾಸ ಬಂದಿರುವುದು ಸುಮ್ಮನೆಯೇನೂ ಅಲ್ಲ. ಆದರೆ ಎಷ್ಟೋ ಸಲ ಅತಿಯಾದ ಆತ್ಮವಿಶ್ವಾಸ ಕೈಕೊಡುತ್ತದೆ. ಕಳೆದ ತಿಂಗಳ ಗ್ಲಾಸ್ಗೋದಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ಗೆ ನಡೆದ ಟ್ರಯಲ್ ಸ್ಪರ್ಧೆಯಲ್ಲಿ 51 ಕೆಜಿ ವಿಭಾಗದಲ್ಲಿ ಮೇರಿ ಕೋಮ್‌ಳನ್ನು ಸೋಲಿಸಿ ಪಿಂಕಿ ಜಿಂಗ್ರಾ ಕಾಮನ್‌ವೆಲ್ತ್‌ಗೆ ತೆರಳಿದ್ದರು. ಅಲ್ಲಿ ಅವರು ಕಂಚಿನ ಪದಕವನ್ನೂ ಗೆದ್ದರು. ಆದರೆ ಏಷ್ಯನ್ ಗೇಮ್ಸ್‌ಗೆ ಈಗಾಗಲೆ ತಂಡ ಆಯ್ಕೆಯಾಗಿದ್ದು, 51 ಕೆ.ಜಿ ವಿಭಾಗದಲ್ಲಿ ಮೇರಿ ಕೋಮ್ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ. 2010ರಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಮೊದಲ ಬಾರಿಗೆ ಮಹಿಳಾ ಬಾಕ್ಸಿಂಗ್ ಸೇರಿಸಲಾಗಿದ್ದು ಅಲ್ಲಿ ಮೇರಿ ಕೋಮ್ ಕಂಚು ಗೆದ್ದಿದ್ದರು. ಹಾಗಾಗಿ ಸೆ.19ರಿಂದ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ ನಮಗೆ ಚಿನ್ನ ಖಚಿತ– ಎನ್ನುತ್ತಾರೆ ಅಭಿಮಾನಿಗಳು!

ಹೋಗಲಿ, ರಿಯೋದಲ್ಲಿ 2016ರಲ್ಲಿ ನಡೆಯಲಿರುವ ಒಲಿಂಪಿಕ್ಸ್ ನಲ್ಲಿ ಮೇರಿ ಕೋಮ್ ಚಿನ್ನ ಗೆಲ್ಲಬಹುದೆ? 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಮೇರಿ ಕೋಮ್ ಕಂಚು ಗೆದ್ದಿರುವುದರಿಂದ, 2016ರಲ್ಲಿ ಚಿನ್ನ ಗೆಲ್ಲುವ ಸಾಧ್ಯತೆ ಹೆಚ್ಚಿದೆ ಎನ್ನುತ್ತಾರೆ ಅಭಿಮಾನಿಗಳು! ಅಭಿಮಾನವೇನೋ ಸರಿ, ವಾಸ್ತವ ಹೇಗಿದೆ? ಬಾಕ್ಸಿಂಗ್‌ನಲ್ಲಿ ಸ್ಪರ್ಧಿಯ ವಯಸ್ಸು ಮತ್ತು ಎತ್ತರವೂ ಮಹತ್ವವೇ. ಮೇರಿ ಕೋಮ್‌ಗೆ ಈಗ 31ರ ಹರೆಯ. (ಬರ್ತ್‌ಡೇ 1/3/1983) 2016ಕ್ಕೆ 33 ದಾಟುತ್ತದೆ. 5 ಅಡಿ 2 ಇಂಚು ಎತ್ತರದ ಮೇರಿ ಕೋಮ್, ತನಗಿಂತ ಎತ್ತರದ ರಷ್ಯನ್ ಸ್ಪರ್ಧಿಗಳ ಎದುರು ಏಗಲು ಸಾಧ್ಯವೆ.. ಎನ್ನುವುದು ಟೀಕಾಕಾರರ ಪ್ರಶ್ನೆ.

ಇಂತಹ ಪ್ರಶ್ನೆಗಳು ಹಿಂದೆಯೂ ಇದ್ದವು. ಮೂರು ಬಾರಿ ವಿಶ್ವ ಚಾಂಪಿಯನ್ ಆದ ಬಳಿಕವೂ ಮೇರಿ ಕೋಮ್‌ರನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದದ್ದೇ ಸ್ಟಾರ್‌ಗಿರಿ ಬಂತು. ಈಶಾನ್ಯ ರಾಜ್ಯಗಳೆಲ್ಲ ಒಟ್ಟು ಸೇರಿ ಸುಮಾರು 1.80 ಕೋಟಿ ರೂಪಾಯಿ ಬಹುಮಾನ ನೀಡಿದವು. ಮಣಿಪುರ ಸರ್ಕಾರ 50 ಲಕ್ಷ ರೂಪಾಯಿ ಜತೆಗೆ ಎರಡು ಎಕರೆ ಜಮೀನನ್ನೂ ನೀಡಿತು. ಅಲ್ಲಿಂದೀಚೆಗೆ ಮೇರಿ ಕೋಮ್ ನೈಜ ತಾರೆಯಾದರು. ಬಾಕ್ಸಿಂಗ್ ಅಕಾಡೆಮಿ ಸ್ಥಾಪಿಸಿದರು. 'ಅನ್‌ಬ್ರೇಕೆಬಲ್' ಎಂಬ ಆತ್ಮಕಥೆ ಬಿಡುಗಡೆ, ಈಗ ತನ್ನದೇ ಜೀವನ ಚರಿತ್ರೆಯ 'ಮೇರಿ ಕೋಮ್' ಸಿನಿಮಾ ಬಿಡುಗಡೆ! 'ಮೂರು ಮಕ್ಕಳ ತಾಯಿ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವುದು ಕಷ್ಟ' ಎನ್ನುವ ಟೀಕಾಕಾರರಿಗೆ, 'ಮೊದಲ ಬಾರಿಗೆ ಅವಳಿ ಮಕ್ಕಳನ್ನು ಹೆತ್ತ ಬಳಿಕ ವಿಶ್ವ ಚಾಂಪಿಯನ್‌ನಲ್ಲಿ ಚಿನ್ನ ಗೆದ್ದಿಲ್ಲವೆ?' ಎಂದು ಮೇರಿ ಮಾರುತ್ತರ ಕೊಡಬಹುದು. ಇಷ್ಟೆಲ್ಲ ಸಾಧನೆ ಮಾಡಿದಾಕೆ ಇನ್ನೊಂದು ಚಿನ್ನ ಗೆಲ್ಲಲಾರರೆ.. ಎಂದು ನಾವೂ ಆಶಾವಾದದಿಂದ ಕಾಯಬಹುದು.



## ಪ್ರಿಯಾಂಕಾ ದಾಖಲೆ

'ಮೇರಿ ಕೋಮ್' ಅವತಾರದಲ್ಲಿ ಪ್ರಿಯಾಂಕಾ ಚೋಪ್ರಾ ಗೆದ್ದಿದ್ದಾರೆ. ಬಾಲಿವುಡ್‌ನಲ್ಲಿ ಬಳುಕುವ ಬಳ್ಳಿಯಂತಹ ಪಾತ್ರಕ್ಕೆ ಹೇಗೆ ಫಿಟ್ ಆಗುತ್ತೇನೋ, ಹಾಗೆಯೇ ಬಾಕ್ಸಿಂಗ್ ತಾರೆಯ ಪಾತ್ರಕ್ಕೂ ನಾನು ಫಿಟ್ ಎಂದು ಪ್ರಿಯಾಂಕಾ ಸಾಧಿಸಿ ತೋರಿಸಿದ್ದಾರೆ. ಮೊದಲ ವಾರವೇ 8 ಕೋಟಿ ರೂಪಾಯಿ ಕಲೆಕ್ಷನ್ ದಾಟಿರುವ ಈ ಚಿತ್ರ, ಒಟ್ಟು 100 ಕೋಟಿ ರೂಪಾಯಿ ಕಲೆಕ್ಷನ್ ದಾಟಬಹುದೆಂದು ಉದ್ಯಮ ಈಗಾಗಲೆ ಅಂದಾಜು ಮಾಡಿದೆ. ಅಂದರೆ ವಿದ್ಯಾ ಬಾಲನ್ (ಮರ್ದಾಂಗಿ), ಕಂಗನಾ (ಕ್ವೀನ್) ಮತ್ತು ಕರೀನಾ ಕಪೂರ್ (ಹೀರೋಯಿನ್) ಈಗಾಗಲೆ ಮಾಡಿದ ಕಲೆಕ್ಷನ್ ದಾಖಲೆಗಳನ್ನು ಪ್ರಿಯಾಂಕಾ ಮುರಿದಂತಾಗುತ್ತದೆ! ಮಾತ್ರವಲ್ಲ, 100 ಕೋಟಿ ದಾಟಿರುವ ಹೀರೋಗಳ ಸಾಲಿಗೆ ಪ್ರಿಯಾಂಕಾ ಕೂಡಾ ಸೇರಿದಂತಾಗುತ್ತದೆ. 'ಬರ್ಫಿ' ಸಿನಿಮಾದಲ್ಲಿ ತನ್ನ ಮುಗ್ಧ ಅಭಿನಯದ ಮೂಲಕ ವಿಮರ್ಶಕರ ಮನ ಗೆದ್ದ ಪ್ರಿಯಾಂಕಾ, ಈ ಚಿತ್ರದಲ್ಲಿ ನೈಜ ಬಾಕ್ಸರುಗಳ ವಿರುದ್ಧವೇ ಸೆಣಸಿದ್ದಾರೆ. ದೈಹಿಕವಾಗಿ ಮೇರಿ ಕೋಮ್‌ರನ್ನೇ ಹೋಲುವಂತಾಗಲು ಜಿಮ್‌ನಲ್ಲೂ ಸಾಕಷ್ಟು ಕಸರತ್ತು ಮಾಡಿರುವ ಪ್ರಿಯಾಂಕಾ, ಒಮ್ಮೆ ಬಾಕ್ಸಿಂಗ್ ರಿಂಗ್‌ನಲ್ಲಿ ಮುಖಕ್ಕೆ ಏಟು ತಿಂದು ರಕ್ತ ಸುರಿದರೂ ಮತ್ತೆ ಎದ್ದು ನಿಂತಿದ್ದಾರೆ. ಈ ಮಾಜಿ ವಿಶ್ವ ಸುಂದರಿ, ಕ್ರೀಡಾಪಟುವಿನ ಚಿತ್ರಕಥೆಗೆ ಜೀವ ತುಂಬಿರುವುದು ಈಕೆಯನ್ನೀಗ ಬಾಲಿವುಡ್‌ನ 'ನಂಬರ್ ಒನ್' ಸ್ಥಾನಕ್ಕೆ ದೀಪಿಕಾ ಪಡುಕೋಣೆಗೇ ಸ್ಪರ್ಧಿಯನ್ನಾಗಿಸಿದೆ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65